ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿ ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2022

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444

ಸಂಪುಟ-22 ಸಂಚಿಕೆ-5 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಕ್ಷೇತ್ರ ಉದಯಾದ್ರಿ ಪಡುಬಿದ್ರಿ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶೃಂಗೇರಿ ಜಗದ್ಗುರುಗಳ ಅಮೃತ ಹಸ್ತದಿಂದ ಬ್ರಹ್ಮಕುಂಭಾಭಿಷೇಕ ಸಂಪನ್ನ...






ತಾ.17.04.2022ರ ಆದಿತ್ಯವಾರ ಪ್ರಾತಃ ಗಂಟೆ 11:00ರ ಮಿಥುನ ಲಗ್ನದಲ್ಲಿ ಬಹಳಷ್ಟು ವಿಜೃಂಭಣೆಯಿಂದ ಪೂಜ್ಯ ಜಗದ್ಗುರುಗಳು ಬಾಲಗಣಪತಿಗೆ ಹಾಗೂ ಪ್ರಸನ್ನ ಪಾರ್ವತಿ ದೇವರಿಗೆ ಬ್ರಹ್ಮಕಲಶ ನೆರವೇರಿಸಿ ಸಮಾಜದ ಎಲ್ಲಾ ಬಂಧುಗಳಿಗೆ ಆಶೀರ್ವಚನವಿತ್ತು ಮುಂದಕ್ಕೆ ಈ ಕ್ಷೇತ್ರ ವೃದ್ಧಿಯಾಗಲಿ ಹಾಗೂ ಶಂಕರತತ್ವ ಪ್ರತಿಪಾದಕರಾದ ನಾವೆಲ್ಲರೂ ಅವರ ನಿರೂಪದಂತೆ ಮುನ್ನಡೆಯೋಣ, ಮುಂದಕ್ಕೆ ಇಲ್ಲಿ ಶಂಕರಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ ಮಾಡಿ ಶಂಕರ ಜಯಂತಿಯೇ ಮೊದಲಾದ ವಿಶೇಷ ಉತ್ಸವಗಳನ್ನು ಆಚರಿಸಿಕೊಂಡು ಬರಬೇಕು ಎಂದು ಹರಸಿ ಆದೇಶವಿತ್ತರು. ಈ ಸಂದರ್ಭ ದೇವರಿಗೆ ಪುಷ್ಪರಥ ಸಮರ್ಪಣೆಯನ್ನು ಕ್ಷೇತ್ರದ ತಂತ್ರಿಗಳ ಮುಂದಾಳುತನದಿಂದ ಶ್ರೀ ಗುರುಗಳು ದೇವರಿಗೆ ಸಮರ್ಪಿಸಿದರು. ಕರ್ನಾಟಕ ಬ್ಯಾಂಕ್‌ನ ಪ್ರಾಯೋಜನೆಯ ಕುಡಿಯುವ ನೀರಿನ ವ್ಯವಸ್ಥೆ, ಬೆಳ್ಳಿಯ ಕುಂಭ, ನಿತ್ಯ ನಂದಾದೀಪಕ್ಕಾಗಿ ಕಾಲ್ದೀಪ, ದೇವಸ್ಥಾನಕ್ಕೆ ಸಿ.ಸಿ. ಕ್ಯಾಮರಾ ಅಳವಡಿಕೆ, ಸ್ವಾಗತ ಗೋಪುರ ಸಮರ್ಪಣೆಯೇ ಮೊದಲಾದ ವ್ಯವಸ್ಥೆಗಳು ಈ ಸಂದರ್ಭದಲ್ಲಿ ಭಕ್ತರ, ದಾನಿಗಳ ಕೃಪೆಯಿಂದ ವ್ಯವಸ್ಥೆಗೊಳಿಸಲಾಯಿತು.

3 ದಿನಗಳಲ್ಲಿ ಸಾಮಾನ್ಯ ಒಟ್ಟು ನಾಲ್ಕು ಸಾವಿರ ಭಕ್ತಜನಸಂದೋಹ ಸೇರಿ ಸಂಪನ್ನಗೊಂಡ ಈ ಬ್ರಹ್ಮಕಲಶದಲ್ಲಿ ಮೊದಲಿಗೆ ಗ್ರಾಮದೇವರಾದ ಮಹಾಲಿಂಗೇಶ್ವರ ದೇವರ ದೇವಸ್ಥಾನದಿಂದ ವಿಜೃಂಭಣೆಯ ರಥ ಮೆರವಣಿಗೆ, ವೇ। ಮೂ। ವಾಗೀಶ ಶಾಸ್ತ್ರಿಗಳು ಹಾಗೂ ವೃತ್ವಿಜರ ಆಗಮನ, ಉಗ್ರಾಣ ಮುಹೂರ್ತ, ಭಜನಾ ವೇದಿಕೆ ಉದ್ಘಾಟನೆ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವೇದಿಕೆಗಳ ಉದ್ಘಾಟನೆ ಮೊದಲಾದ ಕಾರ್ಯಕ್ರಮಗಳು ಸಂಪನ್ನಗೊಂಡವು. ಬ್ರಹ್ಮಕಲಶೋತ್ಸವದ ಅಧ್ಯಕ್ಷರಾದ ಪಡುಬಿದ್ರಿಯ ಡಾ। ವೈ.ಎನ್. ಶೆಟ್ಟಿ ನೇತೃತ್ವದಲ್ಲಿ ಎಲ್ಲಾ ಸಮಿತಿಯವರು, ಅರ್ಚಕವೃಂದ, ಪದಾಧಿಕಾರಿಗಳು, ಸ್ವಯಂ ಸೇವಕರು ಸೇರಿ ಬಹಳಷ್ಟು ಪರಿಶ್ರಮವಹಿಸಿ ಕೇವಲ 30 ದಿನಗಳಲ್ಲಿ ಉತ್ತಮವಾಗಿ ಕಾರ್ಯಕ್ರಮಗಳನ್ನು ನೆರವೇರಿಸಿರುವುದು ಶ್ಲಾಘನೀಯವಾಗಿದೆ. ನಮ್ಮ ಸಮಾಜದ ಅನೇಕ ಸಂಘ ಸಂಸ್ಥೆಗಳವರು, ದಾನಿಗಳು ಸೇರಿ ಬಹುಮೊತ್ತದ ದೇಣಿಗೆ ನೀಡಿ ಸಹಕರಿಸಿದ ಕಾರಣ ಎಲ್ಲೂ ತೊಡಕಾಗದೆ ಸಾಂಘವಾಗಿ ಜರಗಿತು ಹಾಗೂ ಗುರುಗಳು ನಮ್ಮ ಕೆಲಸವನ್ನು ಕೊಂಡಾಡುವಂತೆ ಆಯಿತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮೊದಲಿಗೆ ಶ್ರೀ ಎ.ಉಲ್ಲಾಸ್ ರಾವ್ ಪ್ರಯೋಜನೆಗೈದ "ಭರತ ನಾಟ್ಯ ನೃತ್ಯ ವೈಭವ"ವನ್ನು ವಿದ್ವಾನ್ ಶ್ರೀ ಸುಬ್ರಹ್ಮಣ್ಯ ನಾವುಡ ಶ್ರೀ ನೃತ್ಯಾಲಯ ಕಾರ್ಕಳ ಇವರ ಶಿಷ್ಯ ವರ್ಗದವರು ನೆರವೇರಿಸಿದರು.

ಆ ನಂತರ ವಿದುಷಿ ಡಾ। ಭಾಗ್ಯಶ್ರೀ. ಜಿ.ರಾವ್ ಅವರ ಶ್ರೀ ನೃತ್ಯ ಕಲಾಕೇಂದ್ರ ಪಡುಬಿದ್ರಿ ಇವರಿಂದ ಭರತನಾಟ್ಯ ಹಾಗೂ "ಗಣೇಶ ವಿಜಯಂ" ಎಂಬ ನೃತ್ಯ ರೂಪಕ ಜರಗಿತು. ಎರಡನೇ ದಿನ ಸಂಜೆ ನಂದಾವರ ಶ್ರೀ ಶಶಿಶೇಖರ ರಾವ್ ಪ್ರಯೋಜನೆಯ ನಮ ತುಳುವೆರ್ ಕಲಾ ಸಂಘಟನೆ ಮುದ್ರಾಡಿ ಇವರಿಂದ "ಅವ್ವ ನನ್ನವ್ವ" ನಾಟಕ ಜರಗಿತು. ಆ ಬಳಿಕ ಡಾ! ವೈ.ಎನ್. ಶೆಟ್ಟಿ ಪ್ರಯೋಜನೆಯ "ನಾಟ್ಯ ನಿಲಯಂ" ಬಾಲಕೃಷ್ಣ ಮಂಜೇಶ್ವರ ತಂಡದಿಂದ "ನೃತ್ಯ ನಟನ ಸಂಗೀತ ವೈಭವ" ಸಂಪನ್ನಗೊಂಡಿತು.

ಮೂರನೇ ದಿನ ಸಂಜೆ ಶ್ರೀ ಜನಾರ್ದನ ರಾವ್ ಎಸ್ ನಂದಿಕೂರು ಪ್ರಾಯೋಜನೆಯ ಎಂ. ದೇವಾನಂದ್ ಭಟ್ ಸಂಯೋಜನೆಯ "ಯಕ್ಷಗಾನ ನಾಟ್ಯ ಹಾಸ್ಯವೈಭವ" ಜರಗಿತು. ಅಲ್ಲದೆ ಅನೇಕ ಭಜನಾ ತಂಡದಿಂದ ಭಜನೆ, ಎಲ್ಲೂರು ಶ್ರೀಮತಿ ವಾಣಿಶ್ರೀ ಸತೀಶ್ ರಾವ್ ಅವರಿಂದ "ಭಕ್ತಿ ಸಂಗೀತ ಕಾರ್ಯಕ್ರಮ" ಹೀಗೆ ಒಟ್ಟಂದದ ಯಶಸ್ವಿಗೆ ಕಾರಣವಾಯಿತು.

ಧಾರ್ಮಿಕ ಉಪನ್ಯಾಸಕರಾಗಿ ಆಗಮಿಸಿದ ಶ್ರೀ ಆದರ್ಶ ಗೋಖಲೆ ಕಾರ್ಕಳ ಹಾಗೂ ಬೆಳ್ತಂಗಡಿಯ ಶ್ರೀ ಕೆ.ಧನಂಜಯ ರಾವ್ ಇವರುಗಳು ಬಹಳಷ್ಟು ಮಾರ್ಮಿಕವಾಗಿ ಧರ್ಮ ಜಾಗೃತಿಯ ಬಗ್ಗೆ ಉಪನ್ಯಾಸವಿತ್ತು ಕಾರ್ಯಕ್ರಮಕ್ಕೆ ಕಳೆ ತುಂಬಿದರು.

ಒಟ್ಟು ಭಗವತ್ಭಕ್ತರ ಆಶಯದಂತೆ ಬ್ರಹ್ಮಕಲಶ ಉತ್ತಮವಾಗಿ ನೆರವೇರಿತು ಹಾಗೂ ನಮಗೆಲ್ಲರಿಗೂ ಧನ್ಯತೆಯ ಭಾವವನ್ನು ಮೂಡಿಸಿತು.

ಮುಂದಕ್ಕೆ ನಮ್ಮ ಆಡಳಿತದಲ್ಲಿರುವ ಹಾಗೂ ಅರ್ಚಕತನ ನಡೆಸುತ್ತಿರುವ ಅನೇಕ ದೇವಸ್ಥಾನಗಳು ಜೀರ್ಣೋದ್ಧಾರಗೊಳ್ಳುವ ದಿಸೆಯಲ್ಲಿ ನಾವೆಲ್ಲಾ ಒಂದಾಗಿ ಶ್ರಮಿಸಬೇಕಾಗಿದೆ. ಇದು ನಮ್ಮ ಜವಾಬ್ದಾರಿಯೂ ಹೌದು. ಹಾಗಿದ್ದರೆ ಮಾತ್ರ ನಮ್ಮತನವನ್ನು ಉಳಿಸಿ, ಬೆಳೆಸಿ ಸಮಾಜದಲ್ಲಿ ಉತ್ತಮರಾಗಿ ಜನಾನುರಾಗಿಗಳಾಗಿ ಮೇಲ್ಪಂಕ್ತಿಯಲ್ಲಿ ಎಲ್ಲರ ಗೌರವಕ್ಕೆ ಪಾತ್ರರಾಗಬಹುದು ಎಂಬ ಅಭಿಪ್ರಾಯ ನನ್ನದು.

–ಎಂ. ದೇವಾನಂದ ಭಟ್ ಬೆಳ್ವಾಯಿ.
ಪ್ರಧಾನ ಕಾರ್ಯದರ್ಶಿ, ಬ್ರಹ್ಮಕಲಶೋತ್ಸವ ಸಮಿತಿ.

## ಶ್ರೀ ಶಾರದಾ ಮಂಟಪದಲ್ಲಿ ಶಂಕರ ಜಯಂತಿ ಆಚರಣೆ




ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿಯ ಶ್ರೀ ಶಾರದಾ ದೇವಸ್ಥಾನದಲ್ಲಿ ವೈಶಾಖ ಮಾಸ ಶುಕ್ಲ ಪಕ್ಷದ ಪಂಚಮಿ ದಿನಾಂಕ 06.05.2022 ನೇ ಶುಕ್ರವಾರದಂದು ಶ್ರೀ ಶಂಕರ ಭಗವತ್ಪಾದರ ಜಯಂತಿಯ ಪ್ರಯುಕ್ತ ಧಾರ್ಮಿಕ ಕಾರ್ಯಕ್ರಮ, ಸಭಾ ಕಾರ್ಯಕ್ರಮ ಹಾಗೂ ಶ್ರೀ ಶಂಕರರ ಜೀವನ ಮತ್ತು ಸಂದೇಶಗಳ ರಸಪ್ರಶ್ನೆ ಸ್ಪರ್ಧೆಗಳೊಂದಿಗೆ ಶಂಕರಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಸಮಾಜ ಬಾಂಧವರು, ಭಗವದ್ಭಕ್ತರು ಶ್ರೀ ಶಾರದಾ ದೇವಿಯ ಸನ್ನಿಧಿಯಲ್ಲಿ ಭಕ್ತಿಪೂರ್ವಕ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಬೆಳಿಗ್ಗೆ 'ಶ್ರೀ ಶಂಕರ ಜಯಂತಿ' ಕಾರ್ಯಕ್ರಮಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡದರು.

ಶ್ರೀ ಬೆಳ್ಮಣ್ಣು ವಾಸುದೇವರಾವ್ ಮತ್ತು ಶ್ರೀಮತಿ ತುಳಸಿ ಅವರ ಸಂಕಲ್ಪದೊಂದಿಗೆ ಶ್ರೀ ಶಾರದಾ ದೇವಾಲಯದಲ್ಲಿ ಈ ಧಾರ್ಮಿಕ ಕಾರ್ಯಕ್ರಮ ಶುಭಾರಂಭವಾಯಿತು.

ವೈದಿಕರಾದ ಶ್ರೀ ಜಗದೀಶ ಉಪಾಧ್ಯಾಯ ಪಾವಂಜೆ ಇವರ ನೇತೃತ್ವದಲ್ಲಿ ಶ್ರೀ ಶಂಕರಾಚಾರ್ಯರ ಮೂರ್ತಿಗೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ಅಭಿಷೇಕ ಹಾಗೂ ಪೂಜೆ ನೆರವೇರಿತು.

(3ನೇ ಪುಟಕ್ಕೆ...)



# ಶ್ರೀ ಸ್ಥಾನಿಕ ಸಭಾ (ರಿ) ಪಡುಬಿದ್ರಿ : ಮಹಾಸಭೆ ಮತ್ತು ದಶಮಾನೋತ್ಸವ ಸಂಭ್ರಮ





ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರಿ ಇದರ 13ನೇ ವರ್ಷದ ಮಹಾಸಭೆ ಹಾಗೂ ದಶಮಾನೋತ್ಸವ ಸಂಭ್ರಮ ಕಾರ್ಯಕ್ರಮ ಮೇ 1 ರಂದು ಉದಯಾದ್ರಿ ಬಾಲಗಣಪತಿ ದೇವಸ್ಥಾನದ ವೇದಿಕೆಯಲ್ಲಿ ಯಶಸ್ವಿಯಾಗಿ ನೆರವೇರಿತು. ಬಾಲಗಣಪತಿ ದೇವರಿಗೆ ಸಾಮೂಹಿಕ ಪ್ರಾರ್ಥನೆ ನೆರವೇರಿಸಿ ಬಳಿಕ ಮಹಾಸಭೆ ಮತ್ತು ದಶಮಾನೋತ್ಸವ ಸಂಭ್ರಮದ ಕಾರ್ಯಕ್ರಮವನ್ನು ದೀಪ ಬೆಳಗಿಸಿ ವೇದಘೋಷ ಹಾಗೂ ಗಣಪತಿಯ ಪ್ರಾರ್ಥನೆಯೊಂದಿಗೆ ಚಾಲನೆ ನೀಡಲಾಯಿತು. ಬಳಿಕ ದಶಮಾನೋತ್ಸವದ ಸಾಂಸ್ಕೃತಿಕ ವೇದಿಕೆಯನ್ನು ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿಯ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವ ರಾವ್ ಉದ್ಘಾಟಿಸಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಸುಮಾರು ಐದು ಗಂಟೆಗಳ ಸುದೀರ್ಘ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಉದ್ಘಾಟನಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತೃಸಂಘವಾದ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇದರ ಸದಸ್ಯರಿಂದ ಅತ್ಯುತ್ತಮವಾಗಿ ನೃತ್ಯ ವೈವಿಧ್ಯ ಕಾರ್ಯಕ್ರಮ ಪ್ರದರ್ಶನಗೊಂಡಿತು. ಬಳಿಕ ಉಡುಪಿ, ಮಂಗಳೂರು, ಬೆಳ್ತಂಗಡಿ, ಮೂಡಬಿದ್ರೆ, ಸುರತ್ಕಲ್, ಕಾರ್ಕಳ, ಬ್ರಹ್ಮಾವರ, ಬಂಟ್ವಾಳ ಸಂಘಗಳು ಒಂದಕ್ಕೊಂದು ಮಿಗಿಲಾಗಿ ಕಲಾಪ್ರದರ್ಶನ ನೀಡಿದವು. ಈ ಎಲ್ಲಾ ತಂಡಗಳಲ್ಲಿ ಭಾಗವಹಿಸಿದಂತಹ ಪ್ರತಿಯೊಬ್ಬರಿಗೂ ದಿವಂಗತ ಲಕ್ಷ್ಮೀಗೋಪಾಲಕೃಷ್ಣ ಸ್ಮರಣಾರ್ಥ ಅವರ ಮಕ್ಕಳು ಪ್ರೀತಿಯ ಸ್ಮರಣಿಕೆಯಾಗಿ ಎಲ್ಲರಿಗೂ ಆಕರ್ಷಕ ಉಡುಗೊರೆಯನ್ನು ನೀಡಿದರು. ಈ ಸಂದರ್ಭದಲ್ಲಿ ಈ ಟ್ರಸ್ಟ್‌ಗೆ ವಿಶೇಷ ಅಭಿನಂದನೆಯನ್ನು ಸಲ್ಲಿಸಲಾಯಿತು. ಬಳಿಕ ನಡೆದ ಸಮಾರಂಭದ ಸಂಭ್ರಮ ವೇದಿಕೆಯ ಅಧ್ಯಕ್ಷತೆಯನ್ನು ಶ್ರೀ ಎಂ.ಕೆ. ಮೋಹನ್ ರಾವ್ ಅಧ್ಯಕ್ಷರು ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇವರು ವಹಿಸಿದರು. ಮುಖ್ಯ ಅತಿಥಿಯಾಗಿ ಶ್ರೀ ಎಂ. ದೇವಾನಂದ ಭಟ್ ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಗೌರವ ಉಪಸ್ಥಿತರಾಗಿ ಕಾರ್ಕಳ ಸಂಘದ ಅಧ್ಯಕ್ಷರಾದ ಶ್ರೀ ಕೇಶವ ರಾವ್, ಮಂಗಳೂರು ಸಂಘದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಸುರತ್ಕಲ್ ಸಂಘದ ಅಧ್ಯಕ್ಷರಾದ ಶ್ರೀ ಮಾಧವ್ ರಾವ್, ಬಂಟ್ವಾಳ ಸಂಘದ ಪ್ರತಿನಿಧಿ ಶ್ರೀ ಸಂತೋಷ್ ರಾವ್, ಕಾರ್ಕಳದ ಪೂರ್ವಾಧ್ಯಕ್ಷರಾದ ಶ್ರೀ ಮುರಳೀಧರ್ ಶರ್ಮ ನಿಟ್ಟೆ, ಮಹಾಮಂಡಲದ ಶ್ರೀ ಉದಯ ಕುಮಾರ್, ಸಿ.ಎ.ಗಣೇಶ ಹೆಬ್ಬಾರ್, ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ ವಾಸುದೇವ ರಾವ್, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಎಸ್.ಜನಾರ್ಧನ ರಾವ್, ಮಹಿಳಾ ವಿಭಾಗದ ಅಧ್ಯಕ್ಷೆಯಾದ ವೇದಾವತಿ ಲಕ್ಷ್ಮೀಕಾಂತ ರಾವ್, ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ರಮ್ಯಾ ಅರುಣ್ ಕುಮಾರ್, ಕೋಶಾಧಿಕಾರಿ ಶ್ರೀ ಅರವಿಂದ್ ರಾವ್ ಮತ್ತಿತರರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಾಧಕ ಸನ್ಮಾನದ ನೆಲೆಯಲ್ಲಿ ಶ್ರೇಷ್ಠ ಕೃಷಿಯಲ್ಲಿ ಪುರಸ್ಕೃತರಾದ ಶ್ರೀ ಐ. ಲಕ್ಷ್ಮೀಕಾಂತ್ ರಾವ್ ಇನ್ನ, ಸಮಾಜಸೇವೆಯಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದಂತಹ ಶ್ರೀಮತಿ ಶರಾವತಿ ಯು.ಆರ್. ಎಲ್ಲೂರು, ಕ್ರೀಡೆಯಲ್ಲಿ ಅಂತರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದಂತಹ ಶ್ರೀ ವೈ. ಕುಮಾರಸ್ವಾಮಿ, ಇವರನ್ನು ಸನ್ಮಾನಿಸಲಾಯಿತು. ಸಂಘಕ್ಕೆ ಉಚಿತವಾಗಿ ಲೆಕ್ಕಪರಿಶೋಧನೆ ಮಾಡುತ್ತಿರುವ ಶ್ರೀ ಸಿ.ಎ. ಗಣೇಶ್ ಹೆಬ್ಬಾರ್ ಹಾಗೂ ಸಂಘದ ಎಲ್ಲಾ ಕಾರ್ಯಕ್ರಮಗಳ ಪತ್ರಿಕೆಯನ್ನು ಉಚಿತವಾಗಿ ಮುದ್ರಣ ಮಾಡುತ್ತಿರುವ ಶ್ರೀ ಪ್ರಕಾಶ್ ರಾವ್ ಪಡುಬಿದ್ರೆ ಇವರ ಪರವಾಗಿ ಶ್ರೀ ಪ್ರಮೋದ್ ರಾವ್ ಇವರನ್ನ ಅಭಿನಂದಿಸಿ ಗೌರವಿಸಲಾಯಿತು. ಶ್ರೀ ವಿಶ್ವೇಶ್ವರ್ ರಾವ್, ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್, ಶ್ರೀಮತಿ ಮಮತಾ ಪಾದೆಬೆಟ್ಟು, ಶ್ರೀಮತಿ ಲಲಿತ ಪ್ರಭಾಕರ್ ರಾವ್, ಶ್ರೀಮತಿ ಸುಮಿತ್ರ ಸುಬ್ಬರಾವ್ ಸನ್ಮಾನಿತರ ಸನ್ಮಾನಪತ್ರ ವಾಚಿಸಿದರು. ಶ್ರೀಮತಿ ಪವಿತ್ರ ಕೃಷ್ಣ ರಾವ್ ಶಿಕ್ಷಣ ನಿಧಿಗೆ ದೇಣಿಗೆ ನೀಡಿದವರ ಹೆಸರನ್ನು ಮಂಡಿಸಿದರು. ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ ಸ್ವಾಗತಿಸಿ, ಶ್ರೀ ಎಂ.ಕೆ. ದಿವಕರ್ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ, ಶ್ರೀ ಸುಧಾಕರ್ ಬೆಳ್ಳೆ ವಂದಿಸಿ, ಶ್ರೀ ಅರುಣ್ ಮುಂಡ್ಕೂರು ಮತ್ತು ಶ್ರೀಮತಿ ಸುಮಂಗಲ ನಯನಾಭಿರಾಮಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಕೃಷ್ಣ ರಾಜ್ ರಾವ್ ಮುದರಂಗಡಿ, ಶ್ರೀ ಮಾಧವ ರಾವ್ ಎಲ್ಲೂರು, ಶ್ರೀಮತಿ ವೇದಾವತಿ ದಿವಾಕರ್ ರಾವ್, ಶ್ರೀಮತಿ ಶುಭಾ ಜನಾರ್ಧನ ರಾವ್, ಶ್ರೀ ನಯನಾಭಿರಾಮ ಸ್ವಾಮಿ, ಶ್ರೀಮತಿ ವಿಜಯ ಲಕ್ಷ್ಮೀ ಶರ್ಮ, ಶ್ರೀಮತಿ ಸಾವಿತ್ರಿ ಅರವಿಂದ ರಾವ್ ಹಾಗೂ ಮತ್ತಿತರರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.



**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

PRODUCTS ARE AVAILABLE AT ATTRACTIVE DISCOUNT PRICES



BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS

Sri Balaji Complex, Shop No-G-7,
Near KSRTC Bus Stand,
Udupi - 576101.

City Towers, Service Bus Stand,
Near Rao and Rao Circle, State Bank,
Mangalore - 575001

Branch at Mahalaxmi Prabha Complex, Market Road, Opp Tajmahal Hotel, Karkala



ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

## ಶ್ರೀ ಶಾರದಾ ಮಂಟಪದಲ್ಲಿ ಶಂಕರ ಜಯಂತಿ ಆಚರಣೆ

■...1ನೇ ಪುಟದಿಂದ

‘ಶ್ರೀ ಶಂಕರ ಅಷ್ಟೋತ್ತರ’ ಪಾರಾಯಣ ಹಾಗೂ ‘ಶ್ರೀ ಶಂಕರ ವಿಜಯ’ ಪಾರಾಯಣ ಪಠಣ ನಡೆಯಿತು. ಸ್ಥಳೀಯ ಮಹಿಳಾ ಭಜನಾ ಮಂಡಳಿ ವತಿಯಿಂದ ‘ಅಖಂಡ ಸೌಂದರ್ಯ ಲಹರಿ’ ಪಾರಾಯಣ ಜರಗಿತು. ನಂತರ ಶ್ರೀ ಶಾರದಾ ಮಂಟಪದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ವೈದಿಕರಾದ ಶ್ರೀ ಜಗದೀಶ ಉಪಾಧ್ಯಾಯರು ಶ್ರೀ ಶಂಕರಾಚಾರ್ಯರ ಸಂದೇಶ, ಅವರ ಜೀವನದ ಸಾಧನೆಗಳನ್ನು ಸಭಿಕರಿಗೆ ಪರಿಚಯಿಸಿದರು. ಅಲ್ಪಾಯುಷಿಯಾದ ಶ್ರೀ ಶಂಕರರು ಅಖಂಡ ಭಾರತ ದೇಶವನ್ನು ತಮ್ಮ ಶಿಷ್ಯರೊಂದಿಗೆ ಎರಡು ಬಾರಿ ಕಾಲ್ನಡಿಗೆಯಲ್ಲಿ ಸಂಚರಿಸಿ, ವಿವಿಧ ಧರ್ಮಗಳಲ್ಲಿರುವ ಅಜ್ಞಾನವನ್ನು ಹೋಗಲಾಡಿಸಿ ಸನಾತನ ಧರ್ಮದ ರಕ್ಷಣೆ ಹಾಗೂ ಅದ್ವೈತ ಸಿದ್ಧಾಂತವನ್ನು ಪ್ರಚಾರಗೊಳಿಸಲು ‘ಧರೆಗಿಳಿದು ಬಂದ ದಿವ್ಯ ತೇಜಸ್ಸು’ ಎಂದು ತಿಳಿಸಿದರು. ಉಪನಿಷತ್, ಭಗವದ್ಗೀತೆ ಹಾಗೂ ಬ್ರಹ್ಮಸೂತ್ರಗಳಿಗೆ ಸರಳವಾಗಿ ಬಾಷ್ಯ ರಚಿಸಿದರಲ್ಲದೇ, ಕಾಶ್ಮೀರ ಪುರವಾಸಿನಿ ಶ್ರೀ ಶಾರದೆಯ ಸನ್ನಿಧಿಯ ‘ಸರ್ವಜ್ಞ ಪೀಠ’ ಅಲಂಕರಿಸಿದ ಮಹಾನುಭಾವರ ಸಾಧನೆ ನಮಗೆ ದಾರಿದೀಪವಾಗಲಿ ಎಂದು ಹಾರೈಸಿದರು. ನಿರ್ದೇಶಕ ಕೃಷ್ಣಕುಮಾರ್ ಮಟ್ಟು ಸ್ವಾಗತಿಸಿ, ವಂದಿಸಿದರು. ಸಂಘದ ಅಧ್ಯಕ್ಷ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ಮಾಜಿ ಅಧ್ಯಕ್ಷರಾದ ಸಿ.ಎಸ್. ರಾವ್, ವೈ. ಭುವನೇಂದ್ರ ರಾವ್, ನಿರ್ದೇಶಕರಾದ ಸುರೇಶ್ ಕುತ್ಪಾಡಿ, ಸುರೇಶ್ ಶ್ಯಾನುಭೋಗ್, ಕೃಷ್ಣಮೂರ್ತಿ ಬ್ರಹ್ಮಾವರ, ಉಪಾಧ್ಯಕ್ಷ ಅರವಿಂದ ರಾವ್ ಹಾಗೂ ಕೃಷ್ಣಮೂರ್ತಿ ರಾವ್ ಅಂಬಲಪಾಡಿ ಮೊದಲಾದವರು ಉಪಸ್ಥಿತರಿದ್ದರು.

ಶ್ರೀ ಶಂಕರ ತತ್ವ ಪ್ರಚಾರ ಅಭಿಯಾನ, ಉಡುಪಿ ಜಿಲ್ಲೆ ಹಾಗೂ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಶಾರದಾ ಮಂಟಪದಲ್ಲೆ ‘ಶ್ರೀ ಶಂಕರ ಜಯಂತಿ’ ಪ್ರಯುಕ್ತ “ಶ್ರೀ ಶಂಕರಾಚಾರ್ಯರ ಜೀವನ ಮತ್ತು ಸಂದೇಶ” ವಿಷಯ ಕುರಿತು ಜಿಲ್ಲಾ ಮಟ್ಟದ ಪ್ರಾಥಮಿಕ, ಪ್ರೌಢ ಹಾಗೂ ಮುಕ್ತ ವಿಭಾಗಗಳಲ್ಲಿ ರಸ ಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿತ್ತು.

ಶ್ರೀ ಕೃಷ್ಣಕುಮಾರ್ ಮಟ್ಟು ಈ ಸ್ಪರ್ಧೆ ಸಂಯೋಜಿಸಿ, ನಿರ್ವಹಿಸಿದರು. ಪ್ರಭಾಕರ ಭಂಡಿ, ಕೃಷ್ಣಮೂರ್ತಿ ಬ್ರಹ್ಮಾವರ ಸಹಕರಿಸಿದರು.

ಸ್ಪರ್ಧಾ ವಿಜೇತರಿಗೆ ಶ್ರೀ ಶಾರದಾ ದೇವಿಯ ಸಮ್ಮುಖದಲ್ಲಿ ಬಹುಮಾನವನ್ನು ಒಂದು ವಿಭಾಗದ ಪ್ರಾಯೋಜಕರಾದ ಶ್ರೀ ಭುವನೇಂದ್ರ ರಾವ್ ವಿತರಿಸಿದರು.

ಪೂಜಾ ಪ್ರಸಾದ ಸ್ವೀಕರಿಸಿದ ಬಳಿಕ ಭೋಜನ ಪ್ರಸಾದದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ವರದಿ : ಕೃಷ್ಣಮೂರ್ತಿ ಬ್ರಹ್ಮಾವರ**

**ಕವನಗಳು**

### ಮನದ ಹನಿಗಳು

ನಿಂತ ದೋಣಿ, ನಿಂತ ಬದುಕು
ಅಲೆಗಳು ಎದ್ದೆದ್ದು ಬರಲಿ
ಬುಡಮೇಲಾಗಿಸುವ ಭಯ ಹುಟ್ಟಿಸಲಿ
ದೋಣಿ ಸಮುದ್ರದಲ್ಲಿ ಸಾಗುತ್ತಲೇ ಇರುತ್ತದೆ
ಏಕೆಂದರೆ ದೋಣಿ ನಿರ್ಮಿತವಾಗಿದ್ದು ತೇಲಲು
ಸುಮ್ಮನೆ ದಡದಲ್ಲಿ ಸುರಕ್ಷಿತವಾಗಿ ಇರಲಲ್ಲ
ಬದುಕೆಂಬ ಸಾಗರದಲ್ಲಿ ಎಷ್ಟೇ ಕಷ್ಟದಲೆಗಳು
ಎದ್ದರೂ ಮಣಿಸಿ ಮುಂದೆ ಸಾಗುವ
ಧೈರ್ಯ ನಮ್ಮೊಳಗೆ ಇರಲೇಬೇಕು
ಮುಂದೊಡದೇ ನಿಂತಲ್ಲೇ ನಿಲ್ಲುವ ಬಾಳು
ಖಂಡಿತಾ ಅರ್ಥಪೂರ್ಣವಲ್ಲ, ಅಪೂರ್ಣವದು.

### ಪಾಠ

ಶಾಲೆ ಕಲಿತವನು ಅಕ್ಷರ ಜ್ಞಾನಿಯಾಗಬಹುದು
ಅಥವಾ ವಿದ್ಯಾವಂತನೆನ್ನಿಸಬಹುದು
ಎಲ್ಲಾ ಕಲಿತೆ ಎಂಬ ಹುಸಿ ಹಮ್ಮಿನಲ್ಲಿ
ಅಲ್ಲಿಂದ ಹೊರಗಡಿ ಇಟ್ಟ ಅನಂತರ
ಬದುಕು ನಿರ್ದಾಕ್ಷಿಣ್ಯವಾಗಿ ಕಲಿಸುತ್ತದಲ್ಲ...
ಆ ಪಾಠಗಳು ನಿಜಕ್ಕೂ ದೊಡ್ಡವು ಮತ್ತವು
ಜೀವನವನ್ನು ಬದಲಾಯಿಸಿ ಬಿಡಬಲ್ಲವು.

**–ರಶ್ಮಿ ರಾವ್,**
**ಹೊರಮಾವು, ಬೆಂಗಳೂರು**


# ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮೀ ದೇವಸ್ಥಾನ
**ನಾಗವೃಜ ಕ್ಷೇತ್ರ, ಪಾವಂಜೆ, ಹಳೆಯಂಗಡಿ–576146.**

**ಸಾಮೂಹಿಕ ಧರ್ಮೋಪನಯನ**

ತಾ.02.06.2022ರಂದು ಪ್ರತಿಷ್ಠಾ ವರ್ಧಂತಿ ಪ್ರಯುಕ್ತ ಸಾಮೂಹಿಕ ಧರ್ಮೋಪನಯನ ನೆರವೇರಲಿದೆ. ಸಮಾಜಬಾಂಧವರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಅಪೇಕ್ಷೆ. ಹೆಚ್ಚಿನ ಮಾಹಿತಿಗಾಗಿ ಬಾಲಕೃಷ್ಣ ರಾವ್ ನಕ್ರೆ (9448547997) ಇವರನ್ನು ಸಂಪರ್ಕಿಸಬಹುದು.

**–ಆಡಳಿತ ಮಂಡಳಿ**


# ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ

**(ಕಳೆದ ಸಂಚಿಕೆಯಿಂದ ಮುಂದುವರಿದುದು)**



**–ಡಾ.ಬಿ ಜನಾರ್ದನ ಭಟ್**

ಹರಿದಾಸರಿಗೆ ತಾಂಬೂಲ ಚರ್ವಣದ ಅಭ್ಯಾಸವಿತ್ತು. ಇದರಿಂದ ಅವರ ತುಟಿಗಳು ಯಾವಾಗಲೂ ಕೆಂಪಾಗಿದ್ದವು. ಇದನ್ನು ಗಮನಿಸುತ್ತಿದ್ದ ಹಾಸ್ಯ ಪ್ರವೃತ್ತಿಯ ಒಬ್ಬ ಆಪ್ತರು ವೀಳ್ಯದೆಲೆಯ ಕುರಿತು ಹರಿಕಥೆ ಮಾಡಬೇಕೆಂದು ಕೇಳಿಕೊಂಡರು. ಹರಿದಾಸರಿಗೆ ಇದು ದೊಡ್ಡ ಸವಾಲಾಗಲಿಲ್ಲ. ಹರಿಕಥೆಗೆ ಆರಂಭಿಸಿಯೇ ಬಿಟ್ಟರು. ವೀಳ್ಯದೆಲೆಯ ಏಳು ನಾರುಗಳಿಗೆ ಪ್ರತಿಯೊಂದಕ್ಕೂ ಪ್ರತ್ಯೇಕವಾದ ಕಥೆಯನ್ನು ಸೃಷ್ಟಿಸಿ ಅದಕ್ಕೆ ಹೊಂದಿಕೆಯಾಗುವ ಉಪಕಥೆಗಳನ್ನು ಪೋಣಿಸಿ, ಇಂಪಾದ ರೋಚಕ ಪದ್ಯಗಳಿಂದ ರಮಿಸುತ್ತಾ ಹರಿಕಥೆ ಮುಂದುವರಿಯಿತು. ಮೂರು ಘಂಟೆಯಾದರೂ ಮೂರು ನಾರಿನ ಕಥೆ ಮುಗಿಯಲಿಲ್ಲ. ಇನ್ನು ಏಳು ನಾರಿನ ಕಥೆ ಯಾವಾಗ ಮುಗಿಯಿತೊ ಎಂದು ಶ್ರೋತೃಗಳ ಕೋರಿಕೆಯಂತೆ ಅಲ್ಲಿಗೆ ಮಂಗಳ ಹಾಡಿದರು.

ಇನ್ನೊಂದು ಸಂದರ್ಭ ಹೀಗಾಗಿತ್ತು. ಅಂಗದ ಸಂಧಾನ ಆ ದಿನದ ಕಥೆಯಾಗಿತ್ತು ಮತ್ತು ಅದು ಫಲಿಮಾರು ಗುತ್ತಿನ ಮನೆಯಲ್ಲಿ ವ್ಯವಸ್ಥೆಯಾಗಿತ್ತು. ಫಲಿಮಾರು ಸಮೀಪದ ಅವರಾಲು ಕಂಕಣ ಗುತ್ತು ಬಾಯಾರು ವೆಂಕಪ್ಪ ಹೆಗ್ಡೆ ಎಂಬವರು ಹರಿಕಥೆಗೆ ವಿಶೇಷವಾಗಿ ಆಮಂತ್ರಿಸಲ್ಪಟ್ಟ ಪ್ರಧಾನ ಅತಿಥಿಗಳು. ಫಲಿಮಾರು ಗುತ್ತಿನವರ ಮನೆಯಲ್ಲಿ ಹರಿಕಥೆ ವ್ಯವಸ್ಥೆಯಾಗಿತ್ತು. ವೆಂಕಪ್ಪ ಹೆಗ್ಡೆಯವರು ಹರಿದಾಸರ ಆಪ್ತರೇ ಆಗಿದ್ದರು. ಸಮಯ ಪಾಲನೆಯ ಶಿಸ್ತನ್ನು ಇಟ್ಟುಕೊಂಡಿದ್ದ ಹರಿದಾಸರು ಯಾರಿಗೂ ಕಾಯದೆ ಕಥೆಗೆ ತೊಡಗಿ ಆ ಕಥೆ ಈ ದಿಸೆಯಲ್ಲೇ ಸಾಗಿತ್ತು. – ಕಪಿಸೇನೆಯೊಂದಿಗೆ ಸೀತಾನ್ವೇಷಣೆಗೆ ಹೊರಟ ಶ್ರೀರಾಮನಿಗೆ ಲಂಕೆಯ ಅಶೋಕವನದಲ್ಲಿ ರಾವಣ ಸೀತೆಯನ್ನು ಬಂಧಿಸಿಟ್ಟ ವಾರ್ತೆ ಹನುಮಂತನಿಂದ ತಿಳಿದು ವಾನರ ಮುಖ್ಯನಲ್ಲೊಬ್ಬನಾದ ಅಂಗದನನ್ನು ಸಂಧಾನಕ್ಕಾಗಿ ರಾವಣನ ಆಸ್ಥಾನಕ್ಕೆ ಕಳುಹಿಸಿಕೊಟ್ಟ. ಅಂಗದನ ಆಗಮನವನ್ನು ಅವಲಕ್ಷಿಸಿದ ರಾವಣನು ಆತನಿಗೆ ಕುಳಿತುಕೊಳ್ಳಲು ಆಸನವನ್ನು ನೀಡದೆ ಅವಮಾನಿಸಿದ. ರಾವಣನ ಈ ದರ್ಪಕ್ಕೆ ತಕ್ಕ ಉತ್ತರವನ್ನು ಕೊಡಲು ಸಂಕಲ್ಪಿಸಿದ ಅಂಗದ ತನ್ನ ಬಾಲವನ್ನೇ ಬೆಳೆಯಿಸಿ ರಾವಣನ ಸಿಂಹಾಸನದ ಎತ್ತರವನ್ನು ಮೀರುವಂತೆ ಸುತ್ತುಕಟ್ಟಿ ಅದರಲ್ಲಿ ಆಸೀನನಾದ. ಇದನ್ನು ನೋಡಿದ ರಾವಣನ ಸಭೆ ಗರಬಡಿದಂತಾಗಿ ಮೂಕವಿಸ್ಮಿತವಾಯಿತು ಮತ್ತು ಅಂಗದನನ್ನೇ ನೋಡುತ್ತಾ ನಿಂತರೆ ಮುಂದೆ ಏನು ಅವಾಂತರ ಕಾದಿದೆಯೋ ಎಂಬ ಭಯದಿಂದ ಉಸಿರುಕಟ್ಟಿ ಮೌನವಾಗಿತ್ತು.

ಹರಿದಾಸರು ಈ ರೀತಿ ಕಥೆ ಹೇಳುವ ಹೊತ್ತಿಗೆ ಪ್ರಧಾನ ಅತಿಥಿ ಹೆಗ್ಡೆಯವರ ಆಗಮನವಾಯಿತು. ಹರಿಕಥೆ ಕೇಳುತ್ತಿದ್ದ ಮಹನೀಯರೆಲ್ಲ ಭಯ ಭಕ್ತಿಯಿಂದ ಹೆಗ್ಡೆಯವರನ್ನು ಎದುರುಗೊಂಡು ಅವರ ಸತ್ಕಾರಕ್ಕಾಗಿ ಮೊದಲೇ ಏರ್ಪಾಟಾಗಿದ್ದ ಮಾಳಿಗೆಯ ಕೊಠಡಿಗೆ ಅವರನ್ನು ಕರೆದೊಯ್ಯಲು ಅನುವಾದರು. ಇದು ಹರಿದಾಸರಿಗೆ ಸರಿ ಬರಲಿಲ್ಲ. ಕಥೆಗೆ ರಸಭಂಗವಾಗಿ ಎಲ್ಲರ ಗಮನ ಅತ್ತ ಕಡೆ ಹೋಯಿತು. ಹರಿದಾಸರು ಯಾರಿಗೂ ಎಂದೂ ಹೆದರುವವರಲ್ಲ. ಅವರು ಯಾವ ಮುಲಾಜು ಇಲ್ಲದೆ ಆ ಸಂದರ್ಭಕ್ಕೆ ಸರಿಯಾದ ಹಾಡನ್ನು ಕಟ್ಟಿ ಈ ರೀತಿ ಹಾಡಿದರು.

*ಅಟ್ಟಕ್ಕೇರಿದನಹೋ ಮಂಗ । ರಾಮ –।*
*ನಿಷ್ಠೆಯ ಮರೆತನೇ ತಪ್ಪನೀ ಮಂಗ ॥*
*ಎಷ್ಟೆಂದರು ಇವ ಮಂಗ । ರಾಮ–।*
*ನಿಷ್ಠೆಯ ಮರೆತನೇ ತಪ್ಪ ನೀ ಮಂಗ ॥ ಪಲ್ಲ ॥*
*ಹುಟ್ಟುಗುಣದವರೊಟ್ಟುಗೂಡುತ ಕೈ – ।*
*ತಟ್ಟಿ ಶಭಾಸೆನೆ ಅಟ್ಟಕ್ಕೇರಿದ ಮಂಗ ॥*
*ಲಕ್ಷ್ಮಣಾಗ್ರಜ ಲಕ್ಷ್ಮೀನಾರಾಯಣನ ।*
*ಸೂಕ್ಷ್ಮವನರಿಯದೆ ರಕ್ಕಸ ಸಭೆಯೊಳು ॥ ಅಟ್ಟಕ್ಕೇರಿದ ॥*

(ಮುಂದುವರಿಯುವುದು)


# ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

*With Best Complimemts From*
SRI M. SHAILESH RAO    Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

ಶುಭಾಶಯಗಳೊಂದಿಗೆ
# ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್    ಸಂಪರ್ಕ ಸಂಖ್ಯೆ 9611099894

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
# ಯೆಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

## ನಿಧನ



### ಶ್ರೀಮತಿ ಶಕುಂತಳಾ ಕೆ.ರಾವ್

ಕೇದಗೆ ಮನೆತನದ ಶ್ರೀಮತಿ ಶಕುಂತಳಾ ಕೆ.ರಾವ್ (72 ವರ್ಷ) ಇವರು ತಾ.19.04.2022ರಂದು ನಿಧನ ಹೊಂದಿದರು. ದಿವಂಗತರು ಪತಿ ರಘುರಾಮ ರಾವ್ ಕೆ, ಒಬ್ಬ ಪುತ್ರ ಹಾಗೂ ನಾಲ್ವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬದವರು ಹಾಗೂ ಅನೇಕ ಬಂಧುಮಿತ್ರರನ್ನು ಅಗಲಿರುತ್ತಾರೆ. ಇವರು ಪಾವಂಜೆ ದಿ| ವಾಸುಭಟ್ಟರ ಸಹೋದರಿ.

★★★★ ★★★★



### ಶ್ರೀಮತಿ ವೈ.ಶಾಂತಾ

ದಿವಂಗತ ಶ್ರೀ ಎಲ್ಲೂರು ಜಗದೀಶ್ ರಾಯರ ಧರ್ಮಪತ್ನಿ ಶ್ರೀಮತಿ ಶಾಂತಾ ವೈ.ರಾವ್ ಅವರು ತಮ್ಮ 83ನೇ ವಯಸ್ಸಿನಲ್ಲಿ ತಾ.19.04.2022ರಂದು ಉಡುಪಿಯ ವಾಸುಕೀನಗರದಲ್ಲಿ ನಿಧನರಾದರು. ದಿವಂಗತರು ಪುತ್ರರು ಪುತ್ರಿಯರು, ಸಹೋದರ ಸಹೋದರಿಯರು ಹಾಗೂ ಅನೇಕ ಬಂಧುಮಿತ್ರರನ್ನು ಅಗಲಿರುತ್ತಾರೆ.

★★★★ ★★★★



### ಪಡುಬಿದ್ರಿ ಚಂದ್ರಹಾಸನ್ ಶರ್ಮಾ

ಶ್ರೀ ಪಡುಬಿದ್ರಿ ಚಂದ್ರಹಾಸನ್ ಶರ್ಮಾ ಅವರು ತಮ್ಮ 63ನೇ ವಯಸ್ಸಿನಲ್ಲಿ ತಾ.03.05.2022ರಂದು ಉಡುಪಿಯಲ್ಲಿ ನಿಧನರಾದರು. ದಿವಂಗತರು ಕುಟುಂಬದವರು ಹಾಗೂ ಅನೇಕ ಬಂಧುಮಿತ್ರರನ್ನು ಅಗಲಿರುತ್ತಾರೆ.

★★★★ ★★★★



### ಶ್ರೀಮತಿ ಕುಮುದ ರಾವ್

ದಿವಂಗತ ಪಾದೆಬೆಟ್ಟು ಕೃಷ್ಣ ರಾವ್‌ರವರ ಧರ್ಮಪತ್ನಿ ಶ್ರೀಮತಿ ಕುಮುದ ರಾವ್ ಅವರು ತಮ್ಮ 89ನೇ ವಯಸ್ಸಿನಲ್ಲಿ ತಾ.03.05.2022ರಂದು ಮೈಸೂರಿನಲ್ಲಿ ನಿಧನರಾದರು. ದಿವಂಗತರು ಓರ್ವ ಪುತ್ರ, ಮೂವರು ಪುತ್ರಿಯರು, ಕುಟುಂಬದವರು ಹಾಗೂ ಅನೇಕ ಬಂಧುಮಿತ್ರರನ್ನು ಅಗಲಿರುತ್ತಾರೆ.

## ಬ್ರಹ್ಮೋಪದೇಶ

### ಚಿ| ಸುಮೇಧ್ ರಾವ್

ಮುಂಬೈನ ಶ್ರೀಮತಿ ಗೀತಾ ರಾವ್ ಮತ್ತು ಡಾ| ಇನ್ನಾ ಪ್ರಭಾಕರ್ ರಾವ್ ಅವರ ಪೌತ್ರ ಮತ್ತು ಬೆಂಗಳೂರಿನ ಶ್ರೀಮತಿ ಮೋಹಿನಿ ರಾವ್ ಮತ್ತು ಶ್ರೀ ಶಿವಾನಂದ ರಾವ್ ಅವರ ಪೌತ್ರ ಹಾಗೂ ಶ್ರೀಮತಿ ರಶ್ಮಿ ರಾವ್ ಮತ್ತು ಶ್ರೀ ಅವಿನಾಶ್ ರಾವ್ ದಂಪತಿಯ ಕಿರಿಯ ಪುತ್ರ ಚಿ| ಸುಮೇಧ್ ರಾವ್‌ನ ಬ್ರಹ್ಮೋಪದೇಶವು ತಾ. 06.05.2022 ರಂದು ಮಂಗಳೂರಿನ "ಗೋಪಾಲಕೃಷ್ಣ ಮಠ" ದಲ್ಲಿ ಜರಗಿತು.

★★★★ ★★★★

### ಚಿ| ಸಂವ್ರಿತ್

ಶ್ರೀಮತಿ ಭಾಗ್ಯಶ್ರೀ ಮತ್ತು ಶ್ರೀ ಪ್ರಮೋದ್ ಕುಮಾರ್ ಭಂಡಿ ದಂಪತಿಯ ಪುತ್ರ ಚಿ| ಸಂವ್ರಿತ್‌ನ ಬ್ರಹ್ಮೋಪದೇಶವು ತಾ. 04.05.2022 ರಂದು ಉಡುಪಿಯ ಚಿಟ್ಪಾಡಿಯ "ಸರಸ್ವತಿ ಸಭಾ ಸದನ"ದಲ್ಲಿ ಜರಗಿತು.

★★★★ ★★★★

### ಚಿ| ಗೌರೀಶ

ಶ್ರೀಮತಿ ವಿದ್ಯಾಲಕ್ಷ್ಮೀ ಮತ್ತು ಶ್ರೀ ಯು.ಎಲ್. ಜನಕರಾಜ ರಾವ್ ದಂಪತಿಯ ದ್ವಿತೀಯ ಪುತ್ರ ಚಿ| ಗೌರೀಶನ ಬ್ರಹ್ಮೋಪದೇಶವು ತಾ. 25.04.2022 ರಂದು "ಪುನರೂರು ಶ್ರೀ ವಿಶ್ವನಾಥ ದೇವಸ್ಥಾನ" ದಲ್ಲಿ ಜರಗಿತು.

★★★★ ★★★★

### ಚಿ| ಸ್ವನೀಕ್

ಬೆಂಗಳೂರಿನಲ್ಲಿ ವಾಸವಾಗಿರುವ ಸಂದೀಪ್ ಮೆರ್ಟಾ ಮತ್ತು ಶ್ರೀಮತಿ ಸೌಮ್ಯ ದಂಪತಿಗಳ ಪುತ್ರ ಚಿ| ಸನ್ನೀಕ್ ಹೆರಂಜಾಲು ಇವನ ಉಪನಯನ ಕಾರ್ಯಕ್ರಮವು ಬೆಂಗಳೂರು ಮಲ್ಲೇಶ್ವರಂನಲ್ಲಿರುವ ವಾಗ್ದೇವಿ ಶೇಷಪ್ಪ ಸಭಾಂಗಣದಲ್ಲಿ ತಾ.06.05.2022ರ ಶಂಕರ ಜಯಂತಿಯಂದು ಬಂಧುಮಿತ್ರರ ಸಮಕ್ಷಮದಲ್ಲಿ ನೆರವೇರಿತು.

## ಶುಭ ವಿವಾಹ

ಶ್ರೀ ಕುಂಜಾರುಗಿರಿ ನರಸಿಂಹ ರಾವ್ ಮತ್ತು ಶ್ರೀಮತಿ ಜಯಲಕ್ಷ್ಮೀ ಇವರ ಪುತ್ರ **ಚಿ| ಮಂಜುನಾಥ ರಾವ್** ಮತ್ತು ಶ್ರೀ ಕೆ. ಶ್ರೀಧರ್ ರಾವ್ ಮತ್ತು ಶ್ರೀಮತಿ ಹರಿಣಾಕ್ಷಿ ಇವರ ಪುತ್ರಿ **ಚಿ| ಸೌ| ರೂಪಶ್ರೀ** ಇವರ ವಿವಾಹವು ತಾ.21.04.2022ರಂದು ಮಂಗಳೂರು ಬಿಜೈಯಲ್ಲಿರುವ "ಶ್ರೀ ಸುಬ್ರಹ್ಮಣ್ಯ ಸಭಾ ಭವನ" ದಲ್ಲಿ ಜರಗಿತು.

★★★★ ★★★★

ಶ್ರೀ ವಿಶ್ವನಾಥ ರಾವ್ ಮತ್ತು ದಿ| ಶ್ರೀಮತಿ ಮೀನಾಕ್ಷಿ ಇವರ ಪುತ್ರಿ **ಚಿ| ಸೌ| ಶಿಬಾನಿ** ಮತ್ತು ಶ್ರೀಮತಿ ಮತ್ತು ಶ್ರೀ ಕೃಷ್ಣಮೂರ್ತಿ ವಿ.ಎಸ್.ಐತಾಳ್ ಇವರ ಪುತ್ರ **ಚಿ| ವಿಶ್ವೇಶ್ ಕುಮಾರ್** ಇವರ ವಿವಾಹವು ತಾ.28.04.2022 ರಂದು "ಶ್ರೀ ವ್ಯಾಸ ಮದ್ದ ಸಭಾಂಗಣ"ದಲ್ಲಿ ಜರಗಿತು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.19-05-2022 ಹಾಗೂ ತಾ.17-06-2022 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.18-05-2022 ಹಾಗೂ ತಾ.15-06-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.20-05-2022 ಮತ್ತು ತಾ.04-06-2022 ಹಾಗೂ ತಾ.18-06-2022 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವೃಷಭ ಮಾಸದ ವಿಶೇಷ ದಿನಗಳು

| | | | |
|---|---|---|---|
| 14.05.2022 | ವೃಷಭ ಸಂಕ್ರಮಣ | 31.05.2022 | ಗ್ರೀಷ್ಮಋತು ಜ್ಯೇಷ್ಠ ಮಾಸದ ಶುಕ್ಲಪಕ್ಷಾರಂಭ |
| 16.05.2022 | ಬುದ್ಧ ಪೂರ್ಣಿಮಾ | 10.06.2022 | ಸ್ಮಾರ್ತೈಕಾದಶಿ |
| 17.05.2022 | ವಸಂತ ಋತು ವೈಶಾಖ ಮಾಸದ ಕೃಷ್ಣಪಕ್ಷಾರಂಭ | 11.06.2022 | ಭಾಗವತ-ವೈಷ್ಣವೈಕಾದಶಿ |
| | | 14.06.2022 | ಹುಣ್ಣಿಮೆ, ವಟಸಾವಿತ್ರಿ ವ್ರತ |
| 19.05.2022 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 10.27 | 15.06.2022 | ಗ್ರೀಷ್ಮಋತು ಜ್ಯೇಷ್ಠ ಮಾಸದ ಕೃಷ್ಣಪಕ್ಷಾರಂಭ ಮಿಥುನ ಸಂಕ್ರಮಣ |
| 26.05.2022 | ಸರ್ವೈಕಾದಶಿ | 17.06.2022 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 10.11 |
| 30.05.2022 | ಅಮಾವಾಸ್ಯೆ | | |

## ವಿದ್ಯಾನಿಧಿ ಸ್ಥಾಪನೆ ಹಾಗೂ ಭಾವಚಿತ್ರ ಅನಾವರಣ



ಶ್ರೀಮತಿ ಉಷಾ ಜಿ.ರಾವ್ ಮತ್ತು ಚೆಂಡುಕಳ ಶ್ರೀ ಗಣೇಶ್ ರಾವ್ ತಮ್ಮ ಹೆತ್ತವರಾದ ಚೆಂಡುಕಳ ಶಂಕರನಾರಾಯಣ ರಾವ್ ಮತ್ತು ಶ್ರೀಮತಿ ಮಹಾಲಕ್ಷ್ಮೀ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 1,00,000 ಗಳ ವಿದ್ಯಾನಿಧಿಯನ್ನು ಸ್ಥಾಪಿಸಿದ್ದು ಇದರಿಂದ ಜ್ಯೋತಿಷ್ಯ, ವೇದ, ಸಂಸ್ಕೃತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು. ಇವರನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿನಂದಿಸಿ, ಹಿರಿಯರ ಭಾವಚಿತ್ರ ಅನಾವರಣಗೊಳಿಸಲಾಯಿತು.



ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655



ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue

Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933



Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

## ಶ್ರೀ ಕ್ಷೇತ್ರ ಉದಯಾದ್ರಿ ಪಡುಬಿದ್ರಿ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶೃಂಗೇರಿ ಜಗದ್ಗುರುಗಳ ಅಮೃತ ಹಸ್ತದಿಂದ ನಡೆದ ಬ್ರಹ್ಮಕುಂಭಾಭಿಷೇಕ ಮತ್ತು ಪುಷ್ಪರಥ ಸಮರ್ಪಣೆಯ ಅಮೃತ ಕ್ಷಣಗಳ ಫೋಟೋ ಆಲ್ಬಂ













## ಶ್ರೀ ಶಂಕರ ಜಯಂತಿ ಪ್ರಯುಕ್ತ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆ

ತಾ.06.05.2022ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಶಂಕರ ಜಯಂತಿ ಕಾರ್ಯಕ್ರಮವು ನೆರವೇರಿತು. ಅಂತೆಯೇ ಉಡುಪಿಯಲ್ಲಿ ಮೊದಲ ಬಾರಿ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆ ನೆರವೇರಿತು. ಪ್ರಾಥಮಿಕ, ಪ್ರೌಢ ಮತ್ತು ಹಿರಿಯರ ಮುಕ್ತ ವಿಭಾಗಗಳೆಂದು 3 ವಿಭಾಗಗಳಲ್ಲಿ ನಡೆದ ಸ್ಪರ್ಧೆಯು ಎಚ್.ಎನ್.ನರಸಿಂಹ ಮೂರ್ತಿಯವರು ವಿರಚಿತ "ಶ್ರೀ ಶಂಕರರು ಜೀವನ ಮತ್ತು ಸಂದೇಶ" ಪುಸ್ತಕದ ಆಧಾರಿತ ಪ್ರಶ್ನೆಗಳನ್ನು ಒಳಗೊಂಡಿತ್ತು. ಜಿಲ್ಲಾದ್ಯಂತ ಬೇರೆ ಬೇರೆ ಭಾಗಗಳಿಂದ ಆಗಮಿಸಿದ ಸ್ಪರ್ಧಾಳುಗಳಿಗೆ ಸ್ಪರ್ಧೆ ನಡೆಸಿದ್ದು ಪ್ರಾಥಮಿಕ ವಿಭಾಗದಲ್ಲಿ ಸರ್ವದ್ ಬಾರ್ಕೂರು ಪ್ರಥಮ, ಅದ್ವೈತ ಹೆಬ್ರಿ ದ್ವಿತೀಯ, ಅದಿತಿ ಕಾರ್ಕಳ ತೃತೀಯ, ಪ್ರೌಢ ವಿಭಾಗದಲ್ಲಿ ಅನನ್ಯ ಪೆರ್ಡೂರು ಪ್ರಥಮ, ಅಶಿಶ ರಾಮ ಯು. ಕುಂಜಿಬೆಟ್ಟು ದ್ವಿತೀಯ, ವೈಶಾಖ್ ಧರ್ಮಸ್ಥಳ ತೃತೀಯ ಮತ್ತು ಹಿರಿಯರ ಮುಕ್ತ ವಿಭಾಗದಲ್ಲಿ ಶ್ರೀಮತಿ ವಿಜಯ ಕಾರ್ಕಳ ಪ್ರಥಮ, ಕೃಷ್ಣಮೂರ್ತಿ ಬ್ರಹ್ಮಾವರ ದ್ವಿತೀಯ, ಗಿರಿಜ ಬ್ರಹ್ಮಾವರ ತೃತೀಯ ಬಹುಮಾನವನ್ನು ಗಳಿಸಿದರು. ಒಂದು ವಿಭಾಗದ ಬಹುಮಾನದ ಪ್ರಾಯೋಜಕರಾದ ಶ್ರೀ ವೈ. ಭುವನೇಂದ್ರ ರಾವ್ ಹಾಗೂ ಶ್ರೀ ಸಿ.ಎಸ್. ರಾವ್, ಶ್ರೀ ಮಂಜುನಾಥ ಹೆಬ್ಬಾರ್ ಬಹುಮಾನವನ್ನು ವಿತರಿಸಿದರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಸಂಯೋಜನೆ ಮಾಡಿದ ಈ ಸ್ಪರ್ಧೆಯಲ್ಲಿ ಪ್ರಭಾಕರ ಭಂಡಿ ಸಹಕರಿಸಿದರು. ಶ್ರೀ ಶೃಂಗೇರಿ ಶಾರದಾ ಪೀಠದ ಉಡುಪಿ ಜಿಲ್ಲಾ ಧರ್ಮಾಧಿಕಾರಿ ವೇ.ಬ್ರ. ಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಈ ಮೇಲಿನ ಸ್ಪರ್ಧೆಯು ಆಯೋಜಿಸಲಾಗಿತ್ತು.



ಶ್ರೀ ಸ್ಥಾನಿಕ ಸಭಾ ಪಡುಬಿದ್ರೆ ದಶಮಾನೋತ್ಸವ ಸಂಭ್ರಮದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ವತಿಯಿಂದ ಸಂಘದ ನಿರ್ದೇಶಕರಾದ ವಿಶ್ವನಾಥ್ ಶಾನಭಾಗ್ ನೇತೃತ್ವದಲ್ಲಿ ಕೃಷ್ಣ ಒಡ್ಡೋಲಗದ ಜಾಂಬವತಿ ಕಲ್ಯಾಣ ಪ್ರಸಂಗ ನೆರವೇರಿತು.



ಶ್ರೀ ಶಂಕರ ಜಯಂತಿ ಪ್ರಯುಕ್ತ ತಾ.05.05.2022 ಗುರುವಾರ ಬೆಳಿಗ್ಗೆ 10 ಗಂಟೆಯಿಂದ 5ರ ವರೆಗೆ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಆಡಳಿತ ಮಂಡಳಿಯ ವತಿಯಿಂದ ಹಾಗೂ ಸ್ಥಳೀಯ ಭಜನಾ ಮಂಡಳಿ ವತಿಯಿಂದ ಸೌಂದರ್ಯಲಹರಿ ಅಖಂಡ ಪಾರಾಯಣ ಜರಗಿತು.



ಮೇಷ ಮಾಸ ಕೃಷ್ಣಪಕ್ಷದ ತದಿಗೆ ತಾ.19–4–22ರಂದು ಅಂಗಾರಕ ಸಂಕಷ್ಟಹರ ಚತುರ್ಥಿ ಪ್ರಯುಕ್ತ ಶಾರದಾ ಮಂದಿರದಲ್ಲಿ ಸಾಮೂಹಿಕ ಗಣಹೋಮದ ಪ್ರಯುಕ್ತ ವಿಶೇಷ ಅಪ್ಪ ಸೇವೆಯನ್ನು ಶ್ರೀಮತಿ ಸುಕನ್ಯಾ ಹಾಗೂ ಪಿ ಸತೀಶ್ ರಾವ್ ದಂಪತಿಗಳು ನೀಡಿರುತ್ತಾರೆ

## ಭಾವಪೂರ್ಣ ಶ್ರದ್ಧಾಂಜಲಿ



### ಶ್ರೀಮತಿ ಕುಮುದ ರಾವ್

**ನಿಧನ : 03.05.2022**

ಶ್ರೀಮತಿ ವಿದ್ಯಾ ಪಟೇಲ್ (ಮಗಳು)
ಶ್ರೀ ವಿವೇಕ್ ಕೆ.ರಾವ್ (ಮಗ)
ಶ್ರೀಮತಿ ರೇಖಾ ವಿ.ರಾವ್ (ಸೊಸೆ)
ಶ್ರೀಮತಿ ಪಲ್ಲವಿ ಪಿ.ಹೊನ್ನೂರ್ಕರ್ (ಮಗಳು)
ಶ್ರೀಮತಿ ವೀಣಾ ಜೆ.ರಾವ್ (ಮಗಳು)
ಬಿ. ಜಯರಾಮ ರಾವ್ (ಅಳಿಯ)

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಶೃಂಗೇರಿ ಶ್ರೀಗಳ ಭೇಟಿ



ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಪರಮಾನುಗ್ರಹಪುರಸ್ಸರ ಆಶೀರ್ವಾದಗಳೊಂದಿಗೆ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರು ಶುಭಕೃತ್ ನಾಮ ಸಂವತ್ಸರದ ಚೈತ್ರಕೃಷ್ಣ ಪ್ರತಿಪದ್ ದಿ.17–04–2022 ರವಿವಾರ ಅಪರಾಹ್ನ 4ಗಂಟೆಗೆ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ದಯಮಾಡಿಸಿ ಭಕ್ತಜನರನ್ನು ಅನುಗ್ರಹಿಸಿ, ಆಶೀರ್ವದಿಸಿದರು. ನೂರಾರು ಜನ ಸಮಾಜಬಾಂಧವರು, ಭಕ್ತಾದಿಗಳು ಗುರುಗಳ ಆಶೀರ್ವಾದಕ್ಕೆ ಪಾತ್ರರಾದರು. ಆಡಳಿತ ಮೊಕ್ತೇಸರರಾದ ಶ್ರೀ ಬಿ.ಜಯರಾಮ ರಾವ್ ಹಾಗೂ ನಮ್ಮ ಸಮಾಜದ ಇತರ ಗಣ್ಯರು ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವಂತೆ ಸಹಕಾರ ನೀಡಿದರು.

## ವಿದುಷಿ ಶ್ರೀಮತಿ ರಾಧಾಮುರಳೀಧರ ಇವರಿಗೆ ಸನ್ಮಾನ



ಇತ್ತೀಚೆಗೆ ಕಾಸರಗೋಡಿನ ಅನಂತಪುರದ ಅನಂತಶ್ರೀ ಸಭಾಭವನದಲ್ಲಿ ಜರಗಿದ ಶ್ರೀ ಸದಾಶಿವ ಅನಂತಪುರ ಸಂಸ್ಮರಣಾ ವೇದಿಕೆಯ ಆಶ್ರಯದಲ್ಲಿ ನಡೆದ ಸ್ಮೃತಿ ಸನ್ಮಾನ ಕಾರ್ಯಕ್ರಮದಲ್ಲಿ ಕಾಸರಗೋಡಿನ ಹಿರಿಯ ಸಂಗೀತಜ್ಞೆ ವಿದುಷಿ ಶ್ರೀಮತಿ ರಾಧಾಮುರಳೀಧರರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ಜಿ. ಎಲ್. ಹೆಗ್ಡೆ, ಡಾ.ಎ.ಪಿ.ಕೃಷ್ಣ, ನಿವೃತ್ತ ಪ್ರಾಧ್ಯಾಪಕರು, ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡೆಮಿ, ಶ್ರೀ ಎಂ. ನಾ. ಚಂಬಲ್ತಿಮಾರು, ಸಂಪಾದಕರು, ಕಣಿಪುರ ಮಾಸಪತ್ರಿಕೆ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

## ಬ್ರಹ್ಮೋಪದೇಶ



### ಚಿ| ಸಂಪ್ರಿತ್

ತಾ.04.05.2022ರಂದು ಚಿಟ್ಪಾಡಿ "ಸರಸ್ವತೀ ಸಭಾಸದನ"ದಲ್ಲಿ
ಕೀರ್ತಿಶೇಷ ನರಸಿಂಹ ಭಂಡಿ ಮತ್ತು ಶ್ರೀಮತಿ ಶಾರದಾ ಭಂಡಿ ಇವರ
ಪೌತ್ರ ಹಾಗೂ ಶ್ರೀಮತಿ ಭಾಗ್ಯಶ್ರೀ ಮತ್ತು ಶ್ರೀ ಪ್ರಮೋದ್‌ಕುಮಾರ್
ಭಂಡಿ ಇವರ ಪುತ್ರ ಚಿ| ಸಂಪ್ರಿತ್‌ನ ಬ್ರಹ್ಮೋಪದೇಶಕ್ಕೆ ಆಗಮಿಸಿ,
ವಟುವನ್ನು ಹರಸಿದ ತಮಗೆಲ್ಲರಿಗೂ ಕೃತಜ್ಞತೆಗಳು

–: ಶುಭ ಕೋರುವ :–

ಶ್ರೀಮತಿ ಮತ್ತು ಶ್ರೀ ನಾಗರಾಜ ಭಂಡಿ ಮತ್ತು ಸಹೋದರರು, ಪೆರ್ಡೂರು
ಶ್ರೀಮತಿ ಲಲಿತಾ ಮತ್ತು ಶ್ರೀ ಪುಟ್ಟರಾಜ ಹೆಬ್ಬಾರ್, ವಕ್ವಾಡಿ
ಶ್ರೀಮತಿ ಶಾರದಾ ನರಸಿಂಹ ಭಂಡಿ

## ಬ್ರಹ್ಮೋಪದೇಶ



### ಚಿ| ಪ್ರತೀತ

ತಾ.07.04.2022ರಂದು ಓಂತಿಬೆಟ್ಟು
"ರಾಜಾಪುರ ಸಾರಸ್ವತ ಬ್ರಾಹ್ಮಣ ಸಭಾಭವನ"ದಲ್ಲಿ
ಶ್ರೀಮತಿ ಶ್ರೀದೇವಿ ಮತ್ತು ಶ್ರೀ ಪ್ರದೀಪ ಭಂಡಿ ಇವರ ಪುತ್ರ
ಚಿ| ಪ್ರತೀತನ ಬ್ರಹ್ಮೋಪದೇಶಕ್ಕೆ ಆಗಮಿಸಿ,
ವಟುವನ್ನು ಹರಸಿದ ತಮಗೆಲ್ಲರಿಗೂ ಕೃತಜ್ಞತೆಗಳು

–: ಶುಭ ಕೋರುವ :–

ಶ್ರೀಮತಿ ಜಯಲಕ್ಷ್ಮಿ ಶ್ರೀ ನಾಗರಾಜ ಭಂಡಿ, ಪೆರ್ಡೂರು (ಅಜ್ಜ–ಅಜ್ಜಿ)
ಶ್ರೀ ನಾಗರಾಜ ಭಂಡಿ ಮತ್ತ ಸಹೋದರರು, ಪೆರ್ಡೂರು
ಶ್ರೀಮತಿ ಮತ್ತು ಶ್ರೀ ಕೆ. ಸುಬ್ರಹ್ಮಣ್ಯ ರಾವ್ ಮತ್ತು ಮಕ್ಕಳು, ಕುದಿಗ್ರಾಮ


With Best Compliments From :

BUILDING DREAMS, ENHANCING LIVES.


NAKSHATRA
GANDHINAGAR


SOLITAIRE
HATHILL,


HABITAT
ONE 54
An Urban Lifestyle
DEREBAIL


ANANTESSH
CAR STREET,

Land Trades®
BUILDERS & DEVELOPERS
BUILDING TRUST, DELIVERING VALUE

MANGALURU'S
LEADING REAL ESTATE COMPANY
RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :


Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org